ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ. 201/2018,

ಚಾಸಾ- 10, ಪ್ರಾಸಾ -4

| | |
|---|---|
| ಹೆಸರು | ಯಶೋಧರ |
| ತಂದೆಯ ಹೆಸರು | ಅಣ್ಣಿದೇವಾಡಿಗ |
| ವಯಸ್ಸು | 50 ವರ್ಷ |
| ಕೆಲಸ | ಎಲೆಕ್ಟ್ರೀಷಿಯನ್ |
| ವಾಸ | ಪುತ್ತಿಗೆ |
| ಪ್ರಮಾಣೀಕರಿಸಿದ ದಿನಾಂಕ | 06-12-2022 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಆರೋಪಿಯನ್ನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ , ಅದು ಸ್ವತ್ತು ಸ್ವಾಧೀನ ಮಹಜರ್ ಆಗಿದ್ದು , ಅವುಗಳಲ್ಲಿ ಇರುವ ಸಹಿಗಳು ತನ್ನವೆಂದು ನೋಡಿ ಗುರುತಿಸಿದ ಮೇರೆಗೆ , ಅವುಗಳನ್ನು ನಿಪಿ-5 ಮತ್ತು ನಿಪಿ-6 ಎಂದು , ಸಾಕ್ಷಿಯ ಸಹಿಗಳನ್ನು ನಿಪಿ-5(ಎ) ಮತ್ತು ನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ . ಬಂಗಾರದ ಕಳುವಾದ ಬಗ್ಗೆ ಸಹಿ ಮಾಡಿರುತ್ತೇನೆ . ಕಿಶೋರ್ ಎನ್ನುವವರ ಬಂಗಾರವು ಕಳುವಾಗಿರುತ್ತದೆ. ನಿಪಿ-5 ಕ್ಕೆ ಗೆ ಸಹಿ ಮಾಡುವ ಸಂದರ್ಭದಲ್ಲಿ ಯಾರು ಯಾರು ಇದ್ದರು ಎಂದು ನೆನಪಿಲ್ಲ . ಯಾವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

1. ದಿಃ 18-11-2017 ರಂದು ಆರೋಪಿಯ ಕಬೂಲಾತಿ ಹೇಳಿಕೆಯ ಮೇರೆಗೆ ಕಳುವಾದ ವಸ್ತುಗಳನ್ನು ತೋರಿಸಿಕೊಡುತ್ತೇನೆ ಎಂದು ಹೇಳಿದ ಮೇರೆಗೆ ಗುರುಪುರ ಕೈಕಂಬದ ಸುಶೀಲ್ ಜ್ಯುವೆಲ್ಲರಿ ಅಂಗಡಿಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಚಾಸಾ-9 ರವರು ಇದ್ದರು ಎಂದರೆ ಸರಿಯಲ್ಲ. ಮಹಜರನ್ನು 6-00 ರಿಂದ 7-00 ಗಂಟೆಯವರೆಗೆ ಸುಶೀಲ್ ಜ್ಯುವೆಲ್ಲರಿಯಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಆ ಸಮಯದಲ್ಲಿ ಚಾಸಾ-14 ರವರು ಆರೋಪಿಯನ್ನು ಗುರುತಿಸಿದ್ದು , ಆರೋಪಿಯೇ ಆಭರಣಗಳನ್ನು ಮಾರಾಟ ಮಾಡಿರುತ್ತಾನೆ ಎಂದರೆ ನಾನು ಅಲ್ಲಿಗೆ ಹೋಗಿರುವುದಿಲ್ಲ.

2. ದಿಃ 18-07-2017 ರಂದು ನನ್ನ , ಚಾಸಾ-9 ಮತ್ತು ಚಾಸಾ-14 ರವರ ಸಮಕ್ಷಮ ಠಾಣೆಯಲ್ಲಿ ಆರೋಪಿಯು ಕಳುವು ಮಾಡಿದ ಸ್ವತ್ತುಗಳನ್ನು ಚಾಸಾ-14 ರವರಿಗೆ ನೀಡಿದ ಬಗ್ಗೆ ಹೇಳಿಕೆಯನ್ನು ನೀಡಿದ ಸಂದರ್ಭದಲ್ಲಿ ಮಾಡಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆ ದಿನ ಠಾಣೆಯಲ್ಲಿ ಹಾಜರಿದ್ದರು. ಸದರಿ ಮಹಜರನ್ನು 8-30 ರಿಂದ 9-00 ರವರೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ನಿಪಿ-6 ರಲ್ಲಿ ತೋರಿಸಿರುವ ವಸ್ತುಗಳನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ನೆಕ್ಲೇಸ್ ಮತ್ತು ಬಳೆ ಸ್ವಾಧೀನ ಪಡಿಸಿಕೊಂಡಿರುತ್ತಾರೆ , ಉಳಿದ ಆಭರಣಗಳ ಬಗ್ಗೆ ನನಗೆ ನೆನಪಿಲ್ಲ.

3. ಸದರಿ ಸ್ವತ್ತುಗಳು ಚಾಸಾ-1 ರವರ ಮನೆಯಲ್ಲಿ ಕಳವು ಮಾಡಿದ ವಸ್ತುಗಳಾಗಿರುತ್ತವೆ ಎಂದು ಹೇಳಿರುತ್ತಾರೆ ಎಂದರೆ ನೆನಪಿಲ್ಲ. ಈ ಬಗ್ಗೆ ಪೊಲೀಸರಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಇಲ್ಲ. ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಹೇಳಿಕೆಯನ್ನು 7 ಎಂದು ಗುರುತಿಸಲಾಯಿತು. ದಿಃ 18-11-2017 ರಂದು ಕೈಕಂಬದ ಸುಶೀಲ್ ಜ್ಯುವೆಲ್ಲರ್ಸ್ ಗೆ ಹೋಗಿದ್ದೆ ಎಂದರೆ ಸರಿಯಲ್ಲ. ಹೋಗಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಂಗಾರದ ಒಡವೆಗಳನ್ನು ನನ್ನ ಸಮಕ್ಷಮ ಸ್ವಾಧೀನ ಪಡಿಸಿಕೊಂಡಿದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

1. ಕಿಶೋರ್ ರವರ ಮನೆಗೆ ನಾನು ಹೋಗಿದ್ದಾಗ , ಪೊಲೀಸರು ಅಲ್ಲಿಗೆ ಬಂದಿದ್ದು, ಠಾಣೆಗೆ ಬರಲು ತಿಳಿಸಿದ ಮೇರೆಗೆ ನಾನು ಹೋಗಿರುತ್ತೇನೇ. ಕಿಶೋರ್ ನನ್ನ ನೆರೆಕೆರೆಯವರು. ಕಿಶೋ ರ್ ರವರ ಮನೆಯಲ್ಲಿ ಕಳ್ಳತನವಾದ ಬಂಗಾರದ ಒಡವೆಗಳು ಸಿಕ್ಕಿವೆ, ಬನ್ನಿ ಎಂದು ಠಾಣೆಗೆ ಕರೆದಿರುತ್ತಾರೆ ಎಂದರೆ ಸರಿ . ಆಗ ಠಾಣೆಯಲ್ಲಿ ಒಂದು ನೆಕ್ಲೇಸ್ ಮತ್ತು ಬಳೆ ತೋರಿಸಿರುತ್ತಾರೆ , ಬೇರೆ ಆಭರಣಗಳು ಇದ್ದು , ಅವು ಯಾವುದು ಎಂದು ನನಗೆ ಗೊತ್ತಿಲ್ಲ . ನಾನು ಸಹಿ ಹಾಕಿದ ಮಹಜರಿನಲ್ಲಿ ಒಂದು ಜೊತೆ ಬಳೆ ಮತ್ತು ನೆಕ್ಲೇಸ್ ಇದ್ದು , ಅದಕ್ಕೆ ಸಹಿ ಮಾಡಿರುತ್ತೇನೆ . ನಿಪಿ-5 ಮತ್ತು ನಿಪಿ-6 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ . ಕಿಶೋರ್ ನ ಮನೆಯಲ್ಲಿ ಕಳ್ಳತನವಾದ ಬಂಗಾರವನ್ನು ನೋಡಲು ನಾನು

ಸಹಿ ಹಾಕಿರುತ್ತೇನೆ. ನೀವು ಪೊಲೀಸ್ ಠಾಣೆಗೆ ಹೋಗಲೇ ಇಲ್ಲ ಎಂದರೆ ಸರಿಯಲ್ಲ . ಕಿಶೋರ್ ರವರ ಮನೆಯಲ್ಲಿಯೇ ಸಹಿ ಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ . ನಾನು ಠಾಣೆಗೆ ಹೋಗಲೇ ಇಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ತೋರಿಸಲೇ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಚಾಸಾ-9 ಮತ್ತು ಚಾಸಾ-14 ರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ